**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ.ಆರ್.ನಗರ.**
**ಸಿ.ಸಿ. ನಂಃ 60/2020**

ಫಿರ್ಯಾಧಿದಾರ: ಕೆ.ಆರ್. ನಗರ ಅಬಕಾರಿ ಪೊಲೀಸ್ ಠಾಣೆ

// ವಿರುದ್ಧ //

ಆರೋಪಿತರು: ಜಯಣ್ಣ ಬಿನ್ ಲೇಟ್ ತಮ್ಮೇಗೌಡ

**ದೋಷಾರೋಪಣೆ**

ನಾನು ಶ್ರೀಮತಿ.ಅಸ್ರೀನಾ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು ಕೆ.ಆರ್.ನಗರ, ಈ ಕೆಳಗಿನ ಆರೋಪಿತರು.

| | |
|---|---|
| 01. | ಜಯಣ್ಣ ಬಿನ್ ಲೇಟ್ ತಮ್ಮೇಗೌಡ, ವಃ47 ವರ್ಷ,<br>ವಾಸಃ ನಾಟನಹಳ್ಳಿ ಗ್ರಾಮ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ. |
| 02. | ಕೆ.ಎನ್. ವಿಜಯಕುಮಾರ್ ಬಿನ್ ಕರೀಗೌಡ (ಮೃತಪಟ್ಟಿರುತ್ತಾರೆ). |

ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ:18.03.2019 ರಂದು ಸಂಜೆ 4.30 ಘಂಟೆಯ ಸಮಯದಲ್ಲಿ 2019ರ ಲೋಕಸಭಾ ಚುನಾವಣೆ ನಿಮಿತ್ತ ಮಿರ್ಲೆ ಗ್ರಾಮದಲ್ಲಿ ಗಸ್ತು ನಡೆಸುತ್ತಿರುವಾಗ ನಾಟನಹಳ್ಳಿ ಗ್ರಾಮದ ಆರೋಪಿಯಾದ ನಿಮಗೆ ಸೇರಿದ ಕೋಳಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಸಂಜೆ 5.00 ಗಂಟೆ ಸಮಯದಲ್ಲಿ ದಾಳಿ ನಡೆಸಿದಾಗ ಆರೋಪಿಯಾದ ನೀವು ಯಾವುದೇ ಪರವಾನಿಗೆ ಇಲ್ಲದೇ 90 ಮೀ.ಲಿ ಪ್ರಮಾಣದ ಓರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲ್ ಹೊಂದಿದ 115 ಮದ್ಯ ತುಂಬಿದ ಸೀಲು ಮಾಡಿದ ಟೆಟ್ರಾಪ್ಯಾಕ್

ಮದ್ಯವನ್ನು ಅನಾಧಿಕೃತವಾಗಿ ಮಾರಾಟದ ಉದ್ದೇಶದಿಂದ ದಾಸ್ತಾನು ಇಟ್ಟಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಅಧಿನಿಯಮ ಕಲಂ 14(2) ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು 90 ಮೀ.ಲಿ ಪ್ರಮಾಣದ ಓರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲ್ ಹೊಂದಿದ 115 ಮದ್ಯ ತುಂಬಿದ ಸೀಲು ಮಾಡಿದ ಟೆಟ್ರಾಪ್ಯಾಕ್ ಮದ್ಯವನ್ನು ಸರ್ಕಾರದಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಅನಾಧಿಕೃತವಾಗಿ ಸಾರ್ವಜನಿಕರಿಗೆ ಕುಡಿಯಲು ಮಾರಾಟ ಮಾಡುತ್ತಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಅಧಿನಿಯಮ ಕಲಂ 15 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು 90 ಮೀ.ಲಿ ಪ್ರಮಾಣದ ಓರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲ್ ಹೊಂದಿದ 115 ಮದ್ಯ ತುಂಬಿದ ಸೀಲು ಮಾಡಿದ ಟೆಟ್ರಾಪ್ಯಾಕ್ ಮದ್ಯವನ್ನು ಮಾರಾಟಕ್ಕಾಗಿ ಸಂಗ್ರಹಿಸಿ ಇಡುವುದು ಅಪರಾಧ ಎಂದು ತಿಳಿದಿದ್ದರೂ ಸಹ ಆರೋಪಿಯಾದ ನೀವು ನಿಮ್ಮ ಕೋಳಿ ಅಂಗಡಿಯನ್ನು ಕೃತ್ಯ ನಡೆಸಲು ಉಪಯೋಗಿಸಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಅಧಿನಿಯಮ ಕಲಂ 38(ಎ) ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

4. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು 90 ಮೀ.ಲಿ ಪ್ರಮಾಣದ ಓರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲ್ ಹೊಂದಿದ 115 ಮದ್ಯ ತುಂಬಿದ ಸೀಲು ಮಾಡಿದ ಟೆಟ್ರಾಪ್ಯಾಕ್ ಮದ್ಯವನ್ನು ಅನಾಧಿಕೃತವಾಗಿ ಮಾರಾಟ ಮಾಡುವ ಉದ್ದೇಶದಿಂದ ನಿಮ್ಮ ವಶದಲ್ಲಿಟ್ಟುಕೊಂಡಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಅಧಿನಿಯಮ ಕಲಂ 32(1)ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ.ಗಳು, ಕೆ.ಆರ್. ನಗರ**